[5/3, 11:06 AM] mangala boja: ಷಟ್ಪದಿ

**ಷಟ್ಪದಿ** ಎಂಬುದು ಛಂದಸ್ಸಿನ ಒಂದು ಪ್ರಕಾರ. ಪದ್ಯವೊಂದರಲ್ಲಿ ಆರು ಪಾದಗಳಿದ್ದರೆ ಅದು ಷಟ್ಪದಿ ಎನಿಸುತ್ತದೆ. ಪಾದಗಳ ಗಣ/ಮಾತ್ರಾ/ಅಕ್ಷರ ವಿನ್ಯಾಸಗಳನ್ನು ಹಿಡಿದು ಬೇರೆ ಬೇರೆ ರೀತಿಯ ಷಟ್ಪದಿಗಳಿವೆ. ಆರು ಪಾದಗಳುಳ್ಳ ಪದ್ಯವು ಷಟ್ಪದಿಯೆನಿಸುಕೊಳ್ಳುತ್ತದೆ. ಇದರ ೧, ೨, ೪ ಮತ್ತು ೫ನೇ ಪಾದಗಳು ಪರಸ್ಪರ ಸಮನಾಗಿರುತ್ತದೆ.೩ನೆಯ ಮತ್ತು ೬ನೆಯ ಪಾದಗಳು ಪರಸ್ಪರ ಸಮನಾಗಿರುತ್ತವೆ. ೩ನೆಯ ಪಾದ ೧ನೆಯ ಪಾದದ ಒಂದೂವರೆಯಷ್ಟಿದ್ದು, ಕೊನೆಯಲ್ಲಿ ಒಂದು ಗುರುವಿನಿಂದ ಕೂಡಿರುತ್ತದೆ.ಉದ್ದಂಡ ಷಟ್ಪದಿ ಎಲ್ಲಾ ಷಟ್ಪದಿಗಳಿಂದ ಬೇರೆಯಾಗಿದೆ.

## ಕನ್ನಡ ಸಾಹಿತ್ಯದಲ್ಲಿ ಷಟ್ಪದಿಸಂಪಾದಿಸಿ

ಕನ್ನಡ ಕಾವ್ಯದಲ್ಲಿ ಷಟ್ಪದಿಗಳನ್ನು ಪ್ರಥಮವಾಗಿ ರಾಘವಾಂಕನು ಬಳಕೆಗೆ ತಂದನು. ಹಳಗನ್ನಡ ಸಾಹಿತ್ಯದಲ್ಲಿ ಕಂದ, ಖ್ಯಾತ ಕರ್ನಾಟಕ ವೃತ್ತಗಳು, ಹೇರಳವಾಗಿದ್ದರೆ ನಡುಗನ್ನಡ ಕಾಲದ ಸಾಹಿತ್ಯದಲ್ಲಿ ಷಟ್ಪದಿಗೆ ಮೊದಲ ಸ್ಥಾನ. ಕುಮಾರವ್ಯಾಸನ 'ಗದುಗಿನ ಭಾರತ'ವೆಂದೆ ಪ್ರಸಿದ್ಧವಾಗಿರುವ **ಕರ್ಣಾಟ ಭಾರತ ಕಥಾಮಂಜರಿ**, ಲಕ್ಷ್ಮೀಶಕವಿಯ **ಜೈಮಿನಿ ಭಾರತ** ಇವೆರಡೂ ಷಟ್ಪದಿ ಕಾವ್ಯಗಳೆ. ಮುದ್ದಣ ವಿರಚಿತ **ಶ್ರೀರಾಮ ಪಟ್ಟಾಭಿಷೇಕ** ಇರುವುದು ವಾರ್ಧಕ ಷಟ್ಪದಿಯಲ್ಲಿ.

ಕನ್ನಡ ಸಾಹಿತ್ಯದಲ್ಲಿ ಬಳಕೆಯಲ್ಲಿದ್ದ ಷಟ್ಪದಿಗಳು

ಆರು ಜಾತಿಯ ಷಟ್ಪದಿಗಳ ಲಕ್ಷಣಗಳನ್ನು ಕ್ರಮವಾಗಿ ತಿಳಿಯೋಣ. (ಷಟ್=ಆರು, ಪದಿ=ಪಾದಗಳುಳ್ಳದ್ದು ಎಂದು ಅರ್ಥ).

(೨) ಷಟ್ಪದಿಗಳ ಲಕ್ಷಣಗಳು

(೧) ಶರಷಟ್ಪದಿ

ಈ ಮೇಲಿನ ಪದ್ಯವು ಆರು ಸಾಲುಗಳಿಂದ ಕೂಡಿದೆ. ೧, ೨, ೪, ೫ ನೆಯ ಸಾಲುಗಳು ಒಂದು ಸಮನಾಗಿದ್ದು ೪ ಮಾತ್ರೆಯ ೨ ಗಣಗಳಿಂದ ಕೂಡಿವೆ. ೩ ಮತ್ತು ೬ ನೆಯ ಸಾಲುಗಳು ಒಂದು ಸಮನಾಗಿದ್ದು ೪ ಮಾತ್ರೆಯ ೩ ಗಣಗಳಿಂದಲೂ, ಮೇಲೊಂದು ಗುರುವಿನಿಂದಲೂ ಕೂಡಿವೆ. ಮೂರು ಮತ್ತು ಆರನೆಯ ಸಾಲುಗಳ ಕೊನೆಯಕ್ಷರ ಲಘುವಾಗಿದ್ದರೂ ಗುರುವೆಂದೇ ತಿಳಿಯಬೇಕು. ಈ ಜಾತಿಯ ಪದ್ಯದಲ್ಲಿ ಮಧ್ಯಗುರುವುಳ್ಳ "U _ U" ಈ ರೀತಿಯ ಗಣವು ಎಲ್ಲಿಯೂ ಬರಕೂಡದು. ಇಂಥ ಲಕ್ಷಣದಿಂದ ಕೂಡಿದ ಪದ್ಯಗಳು ಶರಷಟ್ಪದಿಗಳೆಂದು ತಿಳಿಯಬೇಕು.

(೨) ಕುಸುಮಷಟ್ಪದಿ

ಆರು ಪಾದಗಳುಳ್ಳ ಪದ್ಯ. ೧, ೨, ೪, ೫ ನೆಯ ಸಾಲುಗಳು ಒಂದು ಸಮನಾಗಿದ್ದು ಐದೈದು ಮಾತ್ರೆಗಳ ಎರಡು ಗಣಗಳಿಂದ ಕೂಡಿವೆ. ಮೂರು ಮತ್ತು ಆರನೆಯ ಸಾಲುಗಳು ಒಂದು ಸಮನಾಗಿದ್ದು ಐದೈದು ಮಾತ್ರೆಗಳ ಮೂರು ಗಣಗಳಿಂದಲೂ ಮೇಲೆ

ಒಂದು ಗುರುವಿನಿಂದಲೂ ಕೂಡಿವೆ. ೩ ಮತ್ತು ೬ ನೆಯ ಸಾಲಿನ ಕೊನೆಯ ಅಕ್ಷರ ಲಘುವಾಗಿದ್ದರೂ ಗುರುವೆಂದು ಭಾವಿಸಬೇಕು. ಈ ಜಾತಿಯ ಪದ್ಯದಲ್ಲಿ "U_UU " ಹೀಗಿರುವ ಮತ್ತು " U_ _" ಹೀಗಿರುವ ಗಣವು ಬರಕೂಡದು. ಈ ಲಕ್ಷಣಗಳಿಂದ ಕೂಡಿದ ಪದ್ಯಗಳೇ ಕುಸುಮ ಷಟ್ಪದಿಗಳೆನಿಸುವುವು.

(೩) ಭೋಗಷಟ್ಪದಿ

ಆರು ಸಾಲುಗಳಿಂದ ಕೂಡಿದ ಪದ್ಯ. ೧, ೨, ೪, ೫ ನೆಯ ಸಾಲುಗಳು ಒಂದು ಸಮನಾಗಿದ್ದು ಮೂರು ಮೂರು ಮಾತ್ರೆಯ ನಾಲ್ಕು ಗಣಗಳಿಂದ ಕೂಡಿವೆ. ಮೂರು ಮತ್ತು ಆರನೆಯ ಸಾಲುಗಳು ಒಂದು ಸಮನಾಗಿದ್ದು ಮೂರು ಮಾತ್ರೆಗಳ ಆರಾರು ಗಣಗಳಿಂದಲೂ, ಮೇಲೊಂದು ಗುರುವಿನಿಂದಲೂ ಕೂಡಿರುತ್ತವೆ. ಮೂರು ಮತ್ತು ಆರನೆಯ ಸಾಲಿನ ಕೊನೆಯ ಅಕ್ಷರ ಲಘುವಾಗಿದ್ದರೂ ಗುರುವಾಗುವುದು. ಈ ಜಾತಿಯ ಛಂದಸ್ಸಿನ ಪದ್ಯದಲ್ಲಿ " U_ " ಹೀಗೆ ಇರುವ ಮಾತ್ರಾಗಣ ಬರಕೂಡದು. ಇಂಥ ಲಕ್ಷಣಗಳಿಂದ ಕೂಡಿದ ಪದ್ಯವೇ "ಭೋಗಷಟ್ಪದಿ" ಎನಿಸುವುದು.

(೪) ಭಾಮಿನೀ ಷಟ್ಪದಿ

ಆರು ಪಾದಗಳುಳ್ಳ ಪದ್ಯ. ೧, ೨, ೪, ೫ ನೆಯ ಸಾಲುಗಳು ಒಂದು ಸಮನಾಗಿದ್ದು ಮೂರು ಮತ್ತು ನಾಲ್ಕು ಮಾತ್ರೆಗಳ ನಾಲ್ಕು ಗಣಗಳಿರುತ್ತವೆ. (ಮೊದಲು ಮೂರು ಮಾತ್ರೆಯ ಗಣ ಅನಂತರ ೪ ಮಾತ್ರೆಯ ಗಣ ಈ ಕ್ರಮದಲ್ಲಿ ಒಟ್ಟು ನಾಲ್ಕು ಗಣಗಳಿರುತ್ತವೆ.) ೩ನೆಯ ೬ನೆಯ ಸಾಲುಗಳು ಒಂದು ಸಮನಾಗಿದ್ದು, ಮೂರು ಮತ್ತು ನಾಲ್ಕು ಮಾತ್ರೆಗಳ ಆರುಗಣಗಳಿಂದಲೂ ಮೇಲೊಂದು ಗುರುವಿನಿಂದಲೂ ಕೂಡಿರುತ್ತವೆ. ಮೂರು ಮತ್ತು ಆರನೆಯ ಸಾಲುಗಳ ಕೊನೆಯ ಅಕ್ಷರ ಲಘುವಾಗಿದ್ದರೂ ಗುರುವಾಗುತ್ತದೆ. ಈ ಜಾತಿಯ ಪದ್ಯದಲ್ಲಿ "U _ U" ಈ ರೀತಿಯ ಮಧ್ಯ ಗುರುವುಳ್ಳ ಗಣವು ಎಲ್ಲಿಯೂ ಬರಕೂಡದು. ಇಂಥ ಲಕ್ಷಣವುಳ್ಳವು ಭಾಮಿನೀ ಷಟ್ಪದಿಗಳೆನಿಸುವುವು.

(೫) ಪರಿವರ್ಧಿನೀಷಟ್ಪದಿ

ಆರು ಪಾದಗಳುಳ್ಳ ಪದ್ಯ. ೧, ೨, ೪, ೫ ನೆಯ ಸಾಲುಗಳು ಒಂದು ಸಮನಾಗಿದ್ದು, ನಾಲ್ಕು ಮಾತ್ರೆಯ ನಾಲ್ಕು ಗಣಗಳಿಂದ ಕೂಡಿವೆ. ೩ ಮತ್ತು ೬ನೆಯ ಸಾಲುಗಳು ಒಂದು ಸಮನಾಗಿದ್ದು ನಾಲ್ಕು ಮಾತ್ರೆಯ ಆರು ಗಣಗಳಿಂದಲೂ ಮೇಲೊಂದು ಗುರುವಿನಿಂದಲೂ ಕೂಡಿರುತ್ತವೆ. ಈ ಪದ್ಯದಲ್ಲಿ " U _ U " ಈ ರೀತಿಯಿರುವ ಗಣವು ಎಲ್ಲಿಯೂ ಬರಕೂಡದು. ಮೂರು ಮತ್ತು ಆರನೆಯ ಸಾಲಿನ ಕೊನೆಯ ಅಕ್ಷರ ಲಘುವಾಗಿದ್ದರೂ ಗುರುವೆನಿಸುವುದು. ಈ ಲಕ್ಷಣದಿಂದ ಕೂಡಿದ ಪದ್ಯವು ಪರಿವರ್ಧಿನೀಷಟ್ಪದಿಯೆನಿಸುವುದು.

(೬) ವಾರ್ಧಕಷಟ್ಪದಿ

ಆರುಪಾದಗಳುಳ್ಳ ಪದ್ಯ.  ೧, ೨, ೪, ೫ ನೆಯ ಪಾದಗಳು ಒಂದು ಸಮನಾಗಿದ್ದು ೫ ಮಾತ್ರೆಯ ೪ ಗಣಗಳಿಂದ ಕೂಡಿದೆ.  ಮೂರು ಮತ್ತು ಆರನೆಯ ಸಾಲುಗಳು ಒಂದು ಸಮನಾಗಿದ್ದು ೫ ಮಾತ್ರೆಯ ಆರುಗಣ ಮತ್ತು ಮೇಲೊಂದು ಗುರುವಿನಿಂದ ಕೂಡಿರುತ್ತವೆ.  ೩, ೬ ನೆಯ ಸಾಲುಗಳ ಕೊನೆಯ ಅಕ್ಷರ ಲಘುವಾಗಿದ್ದರೂ ಗುರುವಾಗುತ್ತದೆ.  ಇಂಥ ಲಕ್ಷಣಗಳುಳ್ಳ ಪದ್ಯಗಳೇ ವಾರ್ಧಕಷಟ್ಪದಿಗಳೆನಿಸುವುವು

[5/3, 11:16 AM] mangala boja: ತ್ರಿಪದಿ ಲಕ್ಷಣ :-- ತ್ರಿಪದಿ ಅಂದರೆ ಮೂರು ಸಾಲಿನ ಪದ್ಯ , ಇದು ಅಚ್ಚಕನ್ನಡದೇಸೀಮಟ್ಟಿನ ಛಂದಸ್ಸಾಗಿದೆ. ಇದರಲ್ಲಿ ಕೂಡ ಹಲವಾರು ಪ್ರಬೇಧಗಳಿದ್ದರೂ ಅಂಶಗಣ ಆಧಾರಿತ ತ್ರಿಪದಿಗಳೇ ಹೆಚ್ಚು ಪ್ರಾಮುಖ್ಯತೆ ಪಡೆದಿವೆ

ಸರ್ವಜ್ಞನ ವಚನಗಳಲ್ಲಿ ಮಾತ್ರಾಗಣಗಳ ಆಧಾರದ ಮೇಲೆ ಕೂಡ ತ್ರಿಪದಿಗಳನ್ನು ರಚಿಸಿರುವುದು ಕಂಡುಬರುತ್ತದೆ. ಅಲ್ಲಿ ಐದು ಮಾತ್ರೆಗಳ ಗಣಗಳನ್ನು ನಾವು ಕಾಣಬಹುದು

ಅಂಶಗಣ ಆಧಾರಿತ ತ್ರಿಪದಿಗಳಲ್ಲಿ ಹಲವು ವೈವಿಧ್ಯಗಳಿದ್ದರೂ ಜಾನಪದ ಒನಕೆವಾಡು,ಬೀಸುವಕಲ್ಲಿನ ಹಾಡುಗಳಲ್ಲೆಲ್ಲ ಕಂಡುಬರುವ ಸಾಮಾನ್ಯ ತ್ರಿಪದಿಯ ಲಕ್ಷಣ ಹೀಗಿದೆ

ಮೊದಲ ಸಾಲಿನಲ್ಲಿ ನಾಲ್ಕು ವಿಷ್ಣುಗಣಗಳು ಹಾಗೇ ಎರಡನೇ ಸಾಲಿನಲ್ಲಿ ನಾಲ್ಕುಗಣಗಳಲ್ಲಿ ಎರಡನೇ ಗಣ ಬ್ರಹ್ಮಗಣ ಹಾಗೂ ಉಳಿದವು ವಿಷ್ಣುಗಣಗಳು,

ಮೂರನೇ ಸಾಲಿನಲ್ಲಿ ಮೂರುಗಣಗಳೂ, ಅದರಲ್ಲಿಯೂ ಎರಡನೇ ಗಣ ಬ್ರಹ್ಮಗಣವಾಗಿರುತ್ತದೆ.

ವಿನ್ಯಾಸ ಹೀಗಿದೆ-

ವಿಷ್ಣು|ವಿಷ್ಣು|ವಿಷ್ಣು|ವಿಷ್ಣು|

ವಿಷ್ಣು|ಬ್ರಹ್ಮ|ವಿಷ್ಣು|ವಿಷ್ಣು|

ವಿಷ್ಣು|ಬ್ರಹ್ಮ|ವಿಷ್ಣು|

ಇವುಗಳಲ್ಲಿ ಪ್ರತಿ ಸಾಲಿನ ಎರಡನೇ ಅಕ್ಷರ ಹಾಗೂ ಮೊದಲ ಸಾಲಿನ ಮೂರನೇ ಗಣದ ಎರಡನೇ ಅಕ್ಷರ ಪ್ರಾಸದಿಂದಕೂಡಿರುವುದೂ ಇದೆ. ಅಲ್ಲದೇ ಎರಡನೇ ಸಾಲಿನ ಮೊದಲ ಮೂರು ಗಣಗಳ ನಂತರ ಯತಿ ಬರುವಂತೆ ರಚಿಸಿದ ರಚನೆಗಳೂ ಇವೆ.

ನಾಗವರ್ಮನ ತ್ರಿಪದಿಯಲ್ಲೇ ರಚಿತವಾದ ಲಕ್ಷಣ ಪದ್ಯ ಹೀಗಿದೆ-

ಬಿಸುರು ಹೋದ್ಭವಗಣಂ ರಸದಶ ಸ್ಥಾನದೊಳ್

ಬಿಸುರುಹ ನೇತ್ರ ಗಣಮೇ ಬರ್ಕುಳಿದವು

ಬಿಸುರುಹ ನೇತ್ರೇ।

## ಉದಾಹರಣೆ ಸಂಪಾದಿಸಿ

ತ್ರಿಪದಿಯ ಇತಿಹಾಸದಲ್ಲಿ ಮೊಟ್ಟಮೊದಲ ರಚನೆ ಸಿಗುವುದು ಬಾದಾಮಿಯ ತಟ್ಟುಕೋಟಿ ಶಾಸನದಲ್ಲಿರುವ ಕಪ್ಪೆಅರಭಟ್ಟನ ಕೀರ್ತಿಯನ್ನು ಹೇಳುವ ತ್ರಿಪದಿಗಳು

(ಮೊದಲ ಪದ್ಯಕ್ಕೆ ಮಾತ್ರ ಗಣವಿಂಗಡಿಸಿ ತೋರಿಸಿದೆ)

ಸಾಧುಗೆ। ಸಾಧು ಮಾ।ಧುರ್ಯನ್ಗೆ। ಮಾಧುರ್ಯಂ।

ಬಾಧಿಪ್ಪ।ಕಲಿಗೆ । ಕಲಿಯುಗ।ವಿಪರೀತನ್।

ಮಾಧವ।ನೀತನ್।ಪೆಱನಲ್ಲ॥

ಒಳ್ಳಿತ್ತ ಕೆಯ್ವೊರಾರ್ಪೊಲ್ಲದುಮದರನ್ತೆ

ಬಲ್ಲಿತ್ತು ಕಲಿಗೆ ವಿಪರೀತಾ ಪುರಾಕೃತ।

ಮಿಲ್ಲಿ ಸಂಧಿಕ್ಕುಮದು ಬಂದು॥

ಕಟ್ಟಿದ ಸಿಂಘಮನ್ಕೆಟ್ಟೊಡೇನೆಮಗೆಂದು ।

ಬಿಟ್ಟವೋಲ್ಕಲಿಗೆ ವಿಪರೀತಂಗಹಿತರ್ಕ್ಕ।

ಳ್ಕೆಟ್ಟಮೇಣ್ಸತ್ತರವಿಚಾರಮ್॥

## ಜಾನಪದ ತ್ರಿಪದಿಗಳ ಉದಾಹರಣೆ ಸಂಪಾದಿಸಿ

ಕೂಸು ಇದ್ದ ಮನೆಗೆ ಬೀಸಣಿಕೆ ಯಾತಕ್ಕ।

ಕೂಸು ಕಂದಯ್ಯ ಒಳಹೊರಗ। ಆಡಿದರೆ।

ಬೀಸಣಿಕೆ ಗಾಳಿ ಸುಳಿದಾವು॥

ಬ್ಯಾಸಗಿ ದಿವಸಕ ಬೇವಿನ ಮರತಂಪು।

ಭೀಮರತಿಯೆಂಪ ಹೊಳಿತಂಪು। ಹಡೆದವ್ವ ।

ನೀತಂಪು ನನ್ನ ತವರೀಗೆ॥

'

ಸರ್ವಜ್ಞನ ತ್ರಿಪದಿಗಳ ಸ್ವರೂಪ

ಸರ್ವಜ್ಞನ ತ್ರಿಪದಿಗಳಲ್ಲಿ ಒಂದು ವಿಷ್ಣುಗಣಕ್ಕೆ ಬದಲಾಗಿ ೫ ಮಾತ್ರೆಗಳ ಒಂದುಗಣವೂ ಹಾಗೆಯೆ ಒಂದು ಬ್ರಹ್ಮ ಗಣಕ್ಕೆ ಬದಲಾಗಿ ಮೂರು ಅಥವಾ ನಾಲ್ಕು ಮಾತ್ರೆಗಳ ಒಂದು ಗಣವೂ ಬರುತ್ತದೆ.

ಹಾಗೆಯೇ ಅಕ್ಕಮಹಾದೇವಿಯ "ಯೋಗಾಂಗ ತ್ರಿವಿಧಿ" "ಶೀಲವಂತಯ್ಯನ ತ್ರಿವಿಧಿ" ಮೊದಲಾದ ಕಡೆಗಳಲ್ಲಿಯೂ ಈ ರೀತಿಯ ತ್ರಿಪದಿಗಳು ಬಳಕೆಯಾಗಿವೆ.

ಸರ್ವಜ್ಞನ ತ್ರಿಪದಿಗೆ ಉದಾಹರಣೆ ಸಂಪಾದಿಸಿ

-

'ಒಡಲೆಂಬ| ಹುತ್ತಕ್ಕೆ| ನುಡಿ ನಾ|ಲಿಗೆ ಸರ್ಪ|

ಕಡುರೋಷ|ವೆಂಬ| ವಿಷವೇರೆ| ಸಮತೆ ಗಾ|

ರುಡಿಗನಂ| ತಕ್ಕು| ಸರ್ವಜ್ಞ||

ಸಿರಿಬಂದ| ಕಾಲಕ್ಕೆ| ಕರೆದು ದಾ|ನವ ಮಾಡು|

ಪರಿಣಾಮ|ವಕ್ಕು| ಪದವಕ್ಕು| ಕೈಲಾಸ|

ನೆರೆಮನೆ|ಯಕ್ಕು| ಸರ್ವಜ್ಞ||

' (ಪ್ರಸ್ತುತ ಪದ್ಯದಲ್ಲಿ "ನೆರೆಮನೆ" ಎಂಬಲ್ಲಿ ಮಾತ್ರ ನಾಲ್ಕು ಮಾತ್ರೆಗಳ ಗಣ ಬಂದಿದೆ.)

[5/3, 11:19 AM] mangala boja: ಕನ್ನಡದಲ್ಲಿ ರಗಳೆ ಸಾಹಿತ್ಯ :-- ನಡುಗನ್ನಡ ಕಾವ್ಯದ ಛಂದಸ್ಸಿನ, ದೇಸಿಯ ಕಾವ್ಯ ಪದ್ಧತಿಯ ಬಹುಮುಖ್ಯ ಪ್ರಕಾರ. ಇದು ಮಾತ್ರಾಗಣ ಘಟಿತವಾದ ಪದ್ಯಜಾತಿ. ಹರಿಹರನ ರಗಳೆಯ ಆದಿ ಮತ್ತು ಅಂತ್ಯದಲ್ಲಿ ವಿರೂಪಾಕ್ಷ ಮುದ್ರಿಕೆಯ ಕಂದಪದ್ಯ ಇರುತ್ತದೆ. ಈ ಛಂದಸ್ಸಿನಲ್ಲಿ ಹರಿಹರನಾದಿಯಾಗಿ ಅನೇಕ ಕವಿಗಳು ಕಾವ್ಯರಚನೆ ಮಾಡಿದ್ದಾರೆ. ರಗಳೆಯನ್ನು ಹರಿಹರ ಜನಸಾಮಾನ್ಯರ ಚಂಪೂ ಎಂದು ಕರೆದಿದ್ದಾನೆ.[೧]

ಮೂಲ ಸಂಪಾದಿಸಿ

೯ನೇ ಶತಮಾನದಿಂದ ಅಪಭ್ರಂಶದಲ್ಲಿ ಕಥನಕಾವ್ಯ ರಚನೆಗೆ ಬಳಸುತ್ತಿರುವ ಚತುಷ್ಪದಿ ವರ್ಗದ ಪ್ರಮುಖ ವೃತ್ತವೇ ರಗಳೆ. ಸಂಸ್ಕೃತದಿಂದ ವೃತ್ತಗಳು, ಪ್ರಾಕೃತದಿಂದ ಕಂದಪದ್ಯ ಕನ್ನಡಕ್ಕೆ ಬಂದಂತೆ ಪ್ರಾಯಶಃ ಅಪಭ್ರಂಶದಿಂದ ರಗಳೆ ಪ್ರಭೇದಗಳು ಕನ್ನಡಕ್ಕೆ ಬಂದಿವೆ. ರಘಟ> ರಘಡ> ರಗಳ> ರಗಳೆ ಯಾಗಿದೆ. ರಘಟಾ ಎಂದರೆ ಪಾದ ಸಂಖ್ಯಾ ನಿಯಮವಿಲ್ಲದ ಒಂದು ಪದ್ಯಗುಚ್ಛ. ತೆಲಗು ಭಾಷೆಯಲ್ಲಿ ರಗಳೆ ಎಂಬುದಕ್ಕೆ 'ರಗಡ' ಎಂಬ ಪದದ ಬಳಕೆ ಇದೆ. ಆ ಭಾಷೆಯಲ್ಲಿ ರಗಡ ಎಂಬುದು ಒಂದು ಪದ್ಯ ಜಾತಿ.

## ರಗಳೆಯ ವಿಧಗಳು ಸಂಪಾದಿಸಿ

ನಾಲ್ಕು ಅಥವಾ ಅದಕ್ಕಿಂತ ಹೆಚ್ಚು ಸಂಖ್ಯೆಯ ಅನಿಯಮಿತ ಪಾದಸಂಖ್ಯೆಗಳೂ ಆದಿ ಅಥವಾ ಅಂತ್ಯ ಪ್ರಾಸಗಳೂ ಎಲ್ಲಾ ರಗಳೆಗಳಿಗೂ ಸಾಮಾನ್ಯ ಅಂಶಗಳು.

ಇದರಲ್ಲಿ ಮೂರು ಮುಖ್ಯ ವಿಧಗಳನ್ನು ಕಾಣಬಹುದು

೧.ಉತ್ಸಾಹ ರಗಳೆ

೨.ಮಂದನಿಲ ರಗಳೆ

೩.ಲಲಿತ ರಗಳೆ

### ೧.ಉತ್ಸಾಹ ರಗಳೆ - ೧೨ ಸಂಪಾದಿಸಿ

ಇದರಲ್ಲಿ ಮುಖ್ಯವಾಗಿ ಮೂರು ಮಾತ್ರೆಗಳಂತೆ ಗಣ ವಿಂಗಡನೆಯಾಗುತ್ತದೆ.

ಇದರಲ್ಲಿಯೂ ಹಲವು ಪ್ರಕಾರಗಳಿವೆ.

ಒಂದು ಪ್ರಕಾರದಲ್ಲಿ "೩+೩+೩+೩" ಮಾತ್ರೆಗಳಂತೆ ಗಣವಿಂಗಡನೆಯಾಗುವುದು

ಇನ್ನೊಂದು ಪ್ರಕಾರದಲ್ಲಿ "೩+೩+೩+ಗುರು" ಮಾತ್ರೆಗಳಂತೆ ಗಣವಿಂಗಡನೆಯಾಗುವುದು

ಈ ಎರಡೂ ಪ್ರಕಾರಗಳೂ ಹಿಂದಿನ ಕವಿಗಳಿಂದ ಪ್ರಯೋಗಿಸಲ್ಪಟ್ಟಿದೆ.

ಸಾಮಾನ್ಯನಿಯಮದಂತೆ ಯಾವಗಣವೂ ಮೊದಲಲ್ಲಿ ಲಘು ಹಾಗೂ ಅನಂತರ ಗುರು ಇರುವ (U _) ವಿನ್ಯಾಸ ಹೊಂದಿರುವುದಿಲ್ಲ.

### ೨. ಮಂದಾನಿಲ ರಗಳೆ - ೧೬ ಸಂಪಾದಿಸಿ

ಇದರಲ್ಲಿಯೂ ಹಲವು ಪ್ರಕಾರಗಳಿವೆ.

ಮೊದಲನೆಯ ಪ್ರಕಾರದಲ್ಲಿ ಆದ್ಯಂತ ಪ್ರಾಸನಿಯಮಗಳ ಜೊತೆಯಲ್ಲಿ ಪ್ರತಿಪಾದದಲ್ಲಿಯೂ ನಾಲ್ಕು ಮಾತ್ರೆಯ ನಾಲ್ಕು ಗಣಗಳಿರುತ್ತವೆ.

ಅಂದರೆ ಗಣವಿಭಾಗದಲ್ಲಿ "೪+೪+೪+೪" ಎಂಬ ವಿನ್ಯಾಸವಿರುತ್ತದೆ.

ಇನ್ನೊಂದು ಪ್ರಕಾರದಲ್ಲಿ ಮೂರು ಮತ್ತು ಐದು ಮಾತ್ರೆಗಳ ಗಣಗಳು ಎರಡು ಬಾರಿ ಪುನರಾವರ್ತನೆಯಾಗುತ್ತವೆ.

ಅಂದರೆ ಗಣವಿಭಾಗದಲ್ಲಿ "೩+೫+೩+೫" ಎಂಬ ವಿನ್ಯಾಸವಿರುತ್ತದೆ.

ಈ ವಿಧಗಳಲ್ಲಿಯೂ ಕೂಡ ಮೊದಲು ಲಘು, ಅನಂತರ ಗುರು ಇರುವ ಗಣವಿನ್ಯಾಸ ಬರಬಾರದು.

ಈ ಎರಡೂ ಪ್ರಕಾರಗಳೂ ಹಿಂದಿನ ಕವಿಗಳಿಂದ ಪ್ರಯೋಗಿಸಲ್ಪಟ್ಟಿದೆ.

## ೩.ಲಲಿತರಗಳೆ - ೨೦ ಸಂಪಾದಿಸಿ

ಇದರಲ್ಲಿಯೂ ಬೇರೆ ಬೇರೆ ವಿಧಗಳಿದ್ದರೂ ಮುಖ್ಯವಾಗಿ ನಾಲ್ಕು ಪಂಚಮಾತ್ರಾಗಣಗಳಿಂದ ಕೂಡಿರುತ್ತದೆ.

ಎಲ್ಲ ರಗಳೆಗಳ ನಿಯಮದಂತೆ ಇದರಲ್ಲಿಯೂ ಯಾವಗಣದಲ್ಲಿಯೂ ಮೊದಲು ಲಘು, ಅನಂತರ ಗುರು ಇರುವಂತಹ (U _ UU ಅಥವಾ U _ _)ವಿನ್ಯಾಸವಿರಬಾರದು

ಆದ್ಯಂತಪ್ರಾಸಗಳಿರುವ ಉದಾಹರಣೆ:-

ಏನವ್ವ ಸಂಪಗೆಯೆ ಶಿವನ ಸಿರಿಮುಡಿಗಿಂದು

ನೀನೀವ ಪೊಸ ಪೂಗಳಂ ನೀಡು ನೀಡೆಂದಂ॥

(ಹರಿಹರನ ಪುಷ್ಪರಗಳೆ)

ಧವನವೇ ಶಿವನ ಪರಿಮಳದ ಹಬ್ಬವೆ ಭಾರ

ಭುವನದೊಳ್ ನಿನಗೆ ಸರಿಯಿಲ್ಲ ಸೌರಭಸಾರ॥

(ಹರಿಹರನ ಪುಷ್ಪರಗಳೆ)

ಅಂತ್ಯಪ್ರಾಸ ಮಾತ್ರವಿರುವ ಉದಾಹರಣೆ:-

ಗಂಧರ್ವನಗರಲೇಖೆಯ ತೆರದೆ ಕಂಡಂತೆ

ಕಾಣಲ್ಕೆ ಮಾರನಿರ್ದಾಯೆಡೆಯೊಳಿರ್ದಂತೆ

ವಿಷಯವಿಷವಲ್ಲಿಯಂ ಪೆರ್ಚಿಸುವ ಜಲಧಾರೆ

ಸಾಧುತ್ವಮಂ ಕಿಡಿಸಿ ನಡೆಸುವ ದುರಾಚಾರೆ

ಕಪಟನಾಟಕತತಿಗೆ ತಾನೆ ನೆಲೆಯೆನಿಸುವಳ್

ಕೋಪಗ್ರಹಾವೇಶ ಜನ್ಮನಿಧಿಯೆನಿಸುವಳ್॥

(ನಾಗವರ್ಮನ ಕರ್ಣಾಟ ಕಾದಂಬರಿ)

## ವಿವಿಧ ಕವಿಗಳ ದೃಷ್ಟಿಯಲ್ಲಿ ರಗಳೆ ಸಂಪಾದಿಸಿ

ಎಂ.ಎಂ ಕಲಬುರ್ಗಿಯವರು ಹರಿಹರನ ರಗಳೆಗಳನ್ನು ಮೂರು ವಿಧವಾಗಿ ವಿಂಗಡಿಸಿದ್ದಾರೆ.

ಪುರಾತನರ ರಗಳೆಗಳು = ೬೩

ಶರಣರ/ನೂತನರ/ಅಸಂಖ್ಯಾತರ ರಗಳೆಗಳು =೧೮

ಸಂಕೀರ್ಣ ರಗಳೆಗಳು = ೧೬

೧ನೇ ನಾಗವರ್ಮನ 'ಛಂದೋಬುಧಿ'ಯಲ್ಲಿರುವ ಪದ್ಯದಲ್ಲಿ ರಗಳೆಯ ಪ್ರಸ್ತಾಪವಿದೆ.

ಗಣ ನಿಯಮ ವಿಪರ್ಯಾಸದೊ

ಳೆಣೆ ಪದದೊಳ್ ಕೂಡಿ ಮಾತ್ರೆ ಸಮನಾಗೆ ಗುಣಾ

ಗ್ರಣಿಯ ಮತದಿಂದೆ ತಾಳವ

ಗಣನೆಗೊಡಂಬಟ್ಟುದದುವೆ ರಘಟಾ ಬಂಧಂ॥

ಜಯಕೀರ್ತಿ ಹೇಳುವ ರಗಳೆಯ ಲಕ್ಷಣಗಳೆಂದರೆ-

ಸ್ವಚ್ಛಂದ ಸಂಜ್ಞಾ ರಘಟಾ ಮಾತ್ರಾಕ್ಷರ ಸಮೋದಿತ

ಪಾದದ್ವಂದ್ವ ಸಮಾಕೀರ್ಣಾ ಸುಶ್ರಾವ್ಯ ಸೈವ ಪದ್ಧತಿಃ

ಕೇಶಿರಾಜನ 'ಶಬ್ದಮಣಿದರ್ಪಣ'ದ ಅಪಭ್ರಂಶ ಪ್ರಕರಣದಲ್ಲಿ 'ರಘಟಾ' ಎಂಬುದರ ತದ್ಭವ ರಗಳೆ ಎಂದಿದ್ದಾನೆ.

ಪಂಪಭಾರತದಲ್ಲಿ ಈ ರಗಳೆಯನ್ನು 'ತೋಮ ರಗಳೆ' ಎನ್ನಲಾಗಿದೆ.

## ರಗಳೆಯ ಲಕ್ಷಣಗಳು ಸಂಪಾದಿಸಿ

ಪ್ರತಿಪಾದದಲ್ಲೂ ಮಾತ್ರೆಗಳು ಸಮನಾಗಿರಬೇಕು.

ಪಾದಗಳು ಇಂತಿಷ್ಟೇ ಇರಬೇಕೆಂಬ ನಿಯಮವಿಲ್ಲ.

ಗಣಗಳ ಯೋಜನೆಯಲ್ಲಿ ಲಯಕ್ಕೆ ಹೊಂದುವ ವೈವಿಧ್ಯ ಇರಬೇಕು.

ಎರಡೆರಡು ಪಾದಗಳ ಅಂತ್ಯದಲ್ಲಿ ಪ್ರಾಸವಿರಬೇಕು.

ಸುಶ್ರಾವ್ಯವಾಗಿ, ತಾಳಬದ್ಧವಾಗಿರಬೇಕು.

ಕನ್ನಡದ 'ಲಲಿತ ರಗಳೆ' ಆಂಗ್ಲಭಾಷೆಯ 'ಬ್ಲಾನ್ಕ್ ವರ್ಸ್' ಎಂಬ ಛಂದಪ್ರಕಾರದ ಕೆಲವು ಸೌಲಭ್ಯಗಳನ್ನು ಅಳವದಿಸಿಕೊಂಡು 'ಸರಳ ರಗಳೆ', 'ಮಹಾಛಂದಸ್ಸು'ಗಳೆಂಬ ಹೆಸರುಗಳಿಂದ ಆಧುನಿಕ ಸಾಹಿತ್ಯದಲ್ಲಿ ವಿಕಾಸಗೊಂಡಿದೆ. ಸರಳ ರಗಳೆಯನ್ನು ಮಾಸ್ತಿಯವರು 'ಬಿಡಿವೃತ್ತ' ಎಂದು ಕರೆದರು. ಮಹಾಕವಿ ಕುವೆಂಪು ಈ ಛಂದಸ್ಸಿನಲ್ಲೇ 'ಶ್ರೀ ರಾಮಾಯಣ ದರ್ಶನಂ ಮಹಾಕಾವ್ಯ'ವನ್ನು ಬರೆದಿದ್ದಾರೆ.

[5/3, 11:20 AM] mangala boja: ಕಂದ ಪದ್ಯ

ಮಾತ್ರಾಗಣಗಳು ಎಂದರೆ ಮೂರು, ನಾಲ್ಕು, ಐದು ಮಾತ್ರೆಗಳು ಗುಂಪುಗಳ ಲೆಕ್ಕವಿಟ್ಟುಕೊಂಡು ವಿಭಾಗಿಸುವ ಗಣಗಳು ಮಾತ್ರಾಗಣಗಳೆನಿಸುವುದೆಂದು ಈ ಹಿಂದೆ ವಿವರಿಸಿದೆ.

ಪದ್ಯದಲ್ಲಿನ ಸಾಲುಗಳನ್ನು ಗುರುಲಘುಗಳಿಂದ ಗುರುತಿಸಿದ ಮೇಲೆ ಗುರುವಿಗೆ ಎರಡು ಮಾತ್ರೆ, ಮತ್ತು ಲಘುವಿಗೆ ಒಂದು ಮಾತ್ರೆಯ ಲೆಕ್ಕಹಾಕಿ ಮೂರು, ನಾಲ್ಕು, ಐದು ಮಾತ್ರೆಗಳ ಗುಂಪುಗಳನ್ನು ಒಂದೊಂದು ಗಣವಾಗಿ ವಿಂಗಡಿಸುವ ಗಣಗಳೆಲ್ಲ ಮಾತ್ರಾಗಣಗಳೆನಿಸುವುವು.  ಪದ್ಯಗಳ ಸಾಲುಗಳ ಅಕ್ಷರಗಳಿಗೆ ಗುರುಲಘುಗಳ ಗುರುತುಮಾಡುವುದಕ್ಕೆ ಪ್ರಸ್ತಾರ ಎಂದು ಹೆಸರು.

ಮಾತ್ರಾಗಣಗಳಿಂದ ಕೂಡಿದ ಪದ್ಯಜಾತಿಗಳೆಂದರೆ-ಕಂದ, ಷಟ್ಪದಿಗಳು, ರಗಳೆ ಮೊದಲಾದವುಗಳು.  ಈಗ ಒಂದೊಂದಾಗಿ ಮಾತ್ರಾಗಣದ ಪದ್ಯಗಳ ಲಕ್ಷಣವನ್ನು ತಿಳಿಯಿರಿ.

(೧) ಕಂದ ಪದ್ಯದ ಲಕ್ಷಣ

ಕಂದ ||

ಮೇಲಿನ ಈ ಕಂದ ಪದ್ಯಕ್ಕೆ ಪ್ರಸ್ತಾರ ಹಾಕಿ ಗಣಗಳನ್ನು (ಮಾತ್ರಾಗಣಗಳನ್ನು) ವಿಂಗಡಿಸಿದೆ.  ಈ ಪದ್ಯದಲ್ಲಿ ಮೂರು ಮಾತ್ರೆಯ ಅಥವಾ ಐದು ಮಾತ್ರೆಯಗಣಗಳನ್ನು ವಿಂಗಡಿಸಲು ಬರುವಂತಿಲ್ಲ.  ಇದರಲ್ಲಿ ನಾಲ್ಕು ನಾಲ್ಕು ಮಾತ್ರೆಯ ಗಣಗಳನ್ನೇ ವಿಂಗಡಿಸಬೇಕು.

(೧೦೭) ಲಕ್ಷಣ:- ನಾಲ್ಕು ಸಾಲುಗಳಿಂದ ಕೂಡಿದ ಪದ್ಯ; ಒಂದನೆಯ ಮೂರನೆಯ ಸಾಲುಗಳು ಸಮಾನವಾಗಿದ್ದು ನಾಲ್ಕು ಮಾತ್ರೆಯ ಮೂರು ಗಣಗಳಿಂದ ಕೂಡಿವೆ.  ಎರಡನೆಯ, ನಾಲ್ಕನೆಯ ಸಾಲುಗಳು ಸಮನಾಗಿದ್ದು ನಾಲ್ಕು ಮಾತ್ರೆಯ ಐದು ಗಣಗಳಿಂದ ಕೂಡಿವೆ.

ಪೂರ್ವಾರ್ಧದಲ್ಲಿ ಎಂಟು ಗಣಗಳೂ, ಉತ್ತರಾರ್ಧದಲ್ಲಿ ಎಂಟು ಗಣಗಳೂ ಇವೆ. ಪೂರ್ವಾರ್ಧ ಉತ್ತರಾರ್ಧಗಳ ವಿಷಮ ಸ್ಥಾನಗಳಲ್ಲಿ ಎಂದರೆ ೧, ೩, ೫, ೭ನೆಯ ಗಣಗಳ ಸ್ಥಾನದಲ್ಲಿ "U _ U" ಈ ರೀತಿಯ ಮಧ್ಯ ಗುರುವುಳ್ಳ ಗಣವು ಬರಕೂಡದು. ಪೂರ್ವಾರ್ಧ ಉತ್ತರಾರ್ಧಗಳ ೬ನೆಯ ಗಣವು ಮಾತ್ರ ನಾಲ್ಕು ಮಾತ್ರೆಗಳ UUUU ಹೀಗಿರುವ ಗಣವಾಗಲಿ, ಮಧ್ಯ ಗುರುವುಳ್ಳ U _ U ಹೀಗಿರುವ ಗಣವಾಗಲಿ ಬರಬೇಕು. ಪೂರ್ವಾರ್ಧ ಉತ್ತರಾರ್ಧಗಳಲ್ಲಿ ಕೊನೆಗೆ ಗುರು ಬರುವ "_ _" ಇಂಥ ಗಣವಾಗಲಿ, " U _ U " ಇಂಥ ಗಣವಾಗಲಿ ಬರಬೇಕು.

ಮೇಲಿನ ಕಂದ ಪದ್ಯದಲ್ಲಿ ಮೇಲೆ ಹೇಳಿರುವ ಲಕ್ಷಣಗಳೆಲ್ಲ ಬಂದಿರುವುದನ್ನು ಗಮನಿಸಿರಿ.

[5/3, 11:22 AM] mangala boja: ಸಾಂಗತ್ಯ " ಇದು ಕನ್ನಡದಲ್ಲಿ ಬಹು ಪ್ರಸಿದ್ಧವಾದ ಒಂದು ಅಂಶಚ್ಛಂದಸ್ಸಿನ ಪ್ರಕಾರ.

ಇದರಲ್ಲಿ ನಾಲ್ಕು ಸಾಲು(ಪಾದ)ಗಳಿರುತ್ತವೆ. ಮೊದಲ ಸಾಲು ಹಾಗೂ ಮೂರನೇ ಸಾಲು ಸಮವಾಗಿರುತ್ತವೆ. ಹಾಗೇ ಎರಡನೇ ಸಾಲು ಹಾಗೂ ನಾಲ್ಕನೇ ಸಾಲು ಸಮವಾಗಿರುತ್ತವೆ.

ಹಳೆಗನ್ನಡದ ಕವಿಗಳ ಸಾಂಗತ್ಯಗಳಲ್ಲಿ ಆದಿಪ್ರಾಸ ಬಳಕೆ ಕಂಡುಬಂದರೂ ಇತ್ತೀಚಿನ ಕವಿಗಳು ಆದಿಪ್ರಾಸವನ್ನು ಬಳಸದೇ ಅಂತ್ಯಪ್ರಾಸಬಳಕೆ ಮಾಡಿರುವುದೂ ಇದೆ.

ಮೊದಲ ಸಾಲು ನಾಲ್ಕು ವಿಷ್ಣು ಗಣಗಳಿರುತ್ತವೆ. ಎರಡನೇ ಸಾಲಿನಲ್ಲಿ ಎರಡು ವಿಷ್ಣು ಹಾಗೂ ಒಂದು ಬ್ರಹ್ಮಗಣವಿರುತ್ತದೆ. ಅದರ ವಿನ್ಯಾಸ ಹೀಗಿದೆ.

೧ನೇ ಸಾಲು- ವಿಷ್ಣು ।ವಿಷ್ಣು ।ವಿಷ್ಣು ।ವಿಷ್ಣು

೨ನೇ ಸಾಲು-ವಿಷ್ಣು ।ವಿಷ್ಣು ।ಬ್ರಹ್ಮ

೩ನೇ ಸಾಲು- ವಿಷ್ಣು ।ವಿಷ್ಣು ।ವಿಷ್ಣು ।ವಿಷ್ಣು

೪ನೇ ಸಾಲು-ವಿಷ್ಣು ।ವಿಷ್ಣು ।ಬ್ರಹ್ಮ

ಹಳೆಗನ್ನಡ ಪದ್ಯಕ್ಕೆ ಉದಾಹರಣೆ-

ಅಡಿಗಡಿ।ಗಗ್ರಜ।ರೆಲ್ಲರ।ಬೆಸಗೊಂಡು।

ಮೃಡರಿಪು।ವಾಪುರ।ದಿಂದ।

ಕಡುವೇಗ।ದಿಂದವೆ।ತೆರಳಿದ।ನಾರದ।

ನೊಡನೆ ವಿ।ಮಾನವ।ನೇರಿ।

(ಕಾಮನಕಥೆ-೫-೩)

ಹೊಸಗನ್ನಡ ಪದ್ಯಕ್ಕೆ ಉದಾಹರಣೆ-ಎಸ್.ವಿ.ಪರಮೇಶ್ವರಭಟ್ಟರ "ಇಂದ್ರಚಾಪ"ಕೃತಿಯ ಪದ್ಯ

ಬಂಗಾರ।ದಂತಹ। ನಾ ಕೊಟ್ಟ ।ದಿನವನು ।

ನೀ ಮಣ್ಣ lಮಾಡಿದೆlಯೆಂದುl

ಕೆಂಪನೆl ಮುಖಮಾಡಿl ನನ್ನನೆ lನೋಳ್ಪನುl

ದಿನಪನುl ತಾ ಪೋಗುlವಂದುl

[5/3, 11:24 AM] mangala boja: ಗಣ ಸಂಪಾದಿಸಿ

ಗಣ ಎಂದರೆ ಗುಂಪು.ಕೆಲವು ನಿಯಮಗಳಿಗನುಸಾರವಾಗಿ ವಿಂಗಡಿಸಿದ ಅಕ್ಷರಗಳ ಗುಂಪು. ಈ ಗಣಗಳನ್ನು ಕಟ್ಟುವ ಘಟಕಗಳು ಎಂದರೆ ಹ್ರಸ್ವ ದೀರ್ಘಾಕ್ಷರಗಳು .ಇದರಲ್ಲಿ 'ವರ್ಣಗಣ' ಅಥವಾ'ಅಕ್ಷರಗಣ','ಮಾತ್ರಾಗಣ' ಮತ್ತು 'ಅಂಶಗಣ'ಗಳೆಂಬ ಮೂರು ವಿಧದ ಗಣಗಳಿವೆ.ಅಕ್ಷರಗಳನ್ನು ಆಧರಿಸಿ ಮಾಡಿದ ಗುಂಪು ವರ್ಣಗಣ /ಅಕ್ಷರಗಣವೆನಿಸುತ್ತದೆ. ಈ ಅಕ್ಷರಗಳನ್ನು ಸಂಸ್ಕೃತ ಛಂದಸ್ಸಿನಿಂದ ಕನ್ನಡವು ಪಡೆದುಕೊಂಡಿದೆ.ಮೂರು ಮೂರು ಅಕ್ಷರಗಳನ್ನು ಎಣಿಸಿ ಗಣವಿಭಾಗಿಸಲಾಗುವುದು.

ಮಾತ್ರಾಗಣ ಸಂಪಾದಿಸಿ

ಮಾತ್ರೆಗಳ ಆಧಾರದಿಂದ ಗಣ ವಿಭಾಗ ಮಾಡುವುದೇ ಮಾತ್ರಾಗಣ. ಮೂರು, ನಾಲ್ಕು ಅಥವಾ ಐದು ಮಾತ್ರೆಗಳಿಗೆ ಒಂದೊಂದು ಗಣ ಮಾಡಲಾಗುವುದು. ಸಾಲಿನಲ್ಲಿರುವ ಎಲ್ಲಾ ಮಾತ್ರೆಗಳನ್ನು ಗಣಗಳಾಗಿ ವಿಂಗಡಿಸಬೇಕು.

ಮಾತ್ರೆ ಸಂಪಾದಿಸಿ

ಒಂದು ಅಕ್ಷರವನ್ನು ಉಚ್ಚರಿಸಲು ಬೇಕಾದ ಕಾಲವನ್ನು ಮಾತ್ರೆ ಎಂಬ ಮಾನದಿಂದ ಅಳೆಯಲಾಗುವುದು.

ಲಘು ಸಂಪಾದಿಸಿ

ಒಂದು ಮಾತ್ರಾಕಾಲದಲ್ಲಿ ಉಚ್ಚರಿಸಲ್ಪಡುವ ಅಕ್ಷರಗಳನ್ನು ಲಘು ( U) ಎನ್ನುವರು.

ಗುರು ಸಂಪಾದಿಸಿ

ಎರಡು ಮಾತ್ರಾಕಾಲದಲ್ಲಿ ಉಚ್ಚರಿಸಲ್ಪಡುವ ಅಕ್ಷರಗಳನ್ನು ಗುರು ( - ) ಎಂದು ಕರೆಯುವರು.

ಪ್ರಸ್ತಾರ ಸಂಪಾದಿಸಿ

ಲಘು ಗುರುಗಳನ್ನು ಗುರುತಿಸುವ ಕ್ರಿಯೆಯನ್ನು ಪ್ರಸ್ತಾರ ಹಾಕುವುದು ಎನ್ನುವರು.

ಅಕ್ಷರವು ಗುರು ಎನಿಸುವ ಲಕ್ಷಣಗಳು ಸಂಪಾದಿಸಿ

ಲಕ್ಷಣ ಉದಾಹರಣೆ

ದೀರ್ಘಾಕ್ಷರ _ U

ಶಾಲೆ

ಒತ್ತಕ್ಷರದ ಹಿಂದಿನ ಅಕ್ಷರ _ U U U

ಒ ತ್ತಿ ನ ಣೆ

ಅನುಸ್ವಾರದಿಂದ ಕೂಡಿರುವ ಅಕ್ಷರ _ U U

ಬಂ ದ ನು

ವಿಸರ್ಗದಿಂದ ಕೂಡಿರುವ ಅಕ್ಷರ _ U

ದುಃಖ

ವ್ಯಂಜನಾಕ್ಷರದಿಂದ ಕೂಡಿದ ಅಕ್ಷರ U U _

ಮನದೊಳ್

ಐ ಸ್ವರವಿರುವ ಅಕ್ಷರ _ U U

ಕೈ ಮು ಗಿ

ಔ ಸ್ವರವಿರುವ ಅಕ್ಷರ _ U

ಮೌ ನ

ಷಟ್ಪದಿಯ ಮೂರು ಮತ್ತು ಆರನೆಯ ಪಾದದ ಕೊನೆಯ ಅಕ್ಷರ

ಅಕ್ಷರವು ಲಘು ಎನಿಸುವ ಲಕ್ಷಣಗಳು ಸಂಪಾದಿಸಿ

ಗುರು ಎನಿಸಿಕೊಳ್ಳುವ ಲಕ್ಷಣಗಳನ್ನು ಹೊಂದಿರದ ಅಕ್ಷರಗಳನ್ನು ಲಘು ಎಂದು ಪರಿಗಣಿಸಬೇಕು.

ಮಾತ್ರಾಗಣ ಆಧಾರಿತ ಛಂದಸ್ಸುಗಳು ಸಂಪಾದಿಸಿ

ಕಂದ ಪದ್ಯ ಸಂಪಾದಿಸಿ

ಕಂದ ಪದ್ಯ

ಷಟ್ಪದಿ ಸಂಪಾದಿಸಿ

ಷಟ್ಪದಿ

ರಗಳೆ ಸಂಪಾದಿಸಿ

ಅಕ್ಷರಗಣಸಂಪಾದಿಸಿ

ಅಕ್ಷರಗಳ ಆಧಾರದಿಂದ ಗಣ ವಿಭಾಗ ಮಾಡುವುದೇ ಅಕ್ಷರಗಣ.

ಮೂರು ಮೂರು ಅಕ್ಷರಗಳಿಗೆ ಒಂದೊಂದರಂತೆ ಗಣ ವಿಂಗಡಣೆ ಮಾಡಲಾಗುವುದು. ಪದ್ಯದ ಸಾಲುಗಳಲ್ಲಿರುವ ಎಲ್ಲ ಅಕ್ಷರಗಳೂ ಗಣಗಳಾಗಿ ವಿಂಗಡಿಸಲ್ಪಡಬೇಕೆಂಬ ನಿಯಮವಿಲ್ಲ. ಗಣ ವಿಂಗಡಣೆಯ ನಂತರ ಒಂದು ಅಥವಾ ಎರಡು ಅಕ್ಷರಗಳು ಶೇಷವಾಗಿ ಉಳಿಯಬಹುದು.

ಅಕ್ಷರಗಣಗಳ್ಲಿ ಒಟ್ಟು ಎಂಟು ವಿಧಗಳಿವೆ.

ಯಗಣ

ಮಗಣ

ತಗಣ

ರಗಣ

ಜಗಣ

ಭಗಣ

ನಗಣ

ಸಗಣ

ಯಮಾತಾರಾಜಭಾನ ಸಲಗಂ ಸೂತ್ರ ಸಂಪಾದಿಸಿ

ಅಕ್ಷರಗಣಗಳನ್ನು ಯಮಾತಾರಾಜಭಾನಸಲಗಂ ಎಂಬ ಸೂತ್ರದ ಆಧಾರದಿಂದ ನಿರ್ಣಯಿಸಬಹುದಾಗಿದೆ.

| ಗಣ | ಅಕ್ಷರಗಳು | ಪ್ರಸ್ತಾರ |
|---|---|---|
| ಯಗಣ | ಯಮಾತಾ | U _ _ |
| ಮಗಣ | ಮಾತಾರಾ | _ _ _ |

ತಗಣ ತಾರಾಜ _ _ U

ರಗಣ ರಾಜಭಾ _ U _

ಜಗಣ ಜಭಾನ U _ U

ಭಗಣ ಭಾನಸ _ U U

ನಗಣ ನಸಲ U U U

ಸಗಣ ಸಲಗಂ U U _

ಗಣಗಳನ್ನು ಗುರುತಿಸುವ ಪದ್ಯ ಸಂಪಾದಿಸಿ

ಅಕ್ಷರಗಣದಲ್ಲಿ ಬರುವ ಎಂಟು ಗಣಗಳನ್ನು ಗುರುತಿಸಲು ಕೆಳಗಿನ ಪದ್ಯವು ಸಹಕಾರಿಯಾಗಿದೆ.

ಗುರು ಲಘು ಮೂರಿರೆ ಮ - ನ - ಗಣ

ಗುರು ಲಘು ಮೊದಲಲ್ಲಿ ಬರಲು ಭ - ಯ - ಗಣಮೆಂಬರ್

ಗುರು ಲಘು ನಡುವಿರೆ ಜ - ರ - ಗಣ

ಗುರು ಲಘು ಕೊನೆಯಲ್ಲಿ ಬರಲು ಸ - ತ - ಗಣಮಕ್ಕುಂ

ವೃತ್ತಗಳುಸಂಪಾದಿಸಿ

ಅಕ್ಷರಗಣದ ಛಂದಸ್ಸನ್ನು ವೃತ್ತ ಎಂದು ಕರೆಯಲಾಗುತ್ತದೆ.ಇದರಲ್ಲಿ ಪ್ರತಿ ಪದ್ಯವೂ ನಾಲ್ಕು ಸಾಲುಗಳಿರುತ್ತವೆ. ಆದಿಪ್ರಾಸ ಕಡ್ಡಾಯವಾಗಿ ಬರುತ್ತದೆ.

ಕನ್ನಡದಲ್ಲಿ ಪ್ರಸಿದ್ಧವಾಗಿ ಆರು ವೃತ್ತಗಳು ಬಳಕೆಯಲ್ಲಿವೆ. ಅವನ್ನು ಖ್ಯಾತಕರ್ಣಾಟಕ ವೃತ್ತಗಳು ಎಂದು ಕರೆಯುತ್ತಾರೆ.

ಅವುಗಳು,

ಉತ್ಪಲ ಮಾಲಾ ವೃತ್ತ

ಚಂಪಕ ಮಾಲಾ ವೃತ್ತ

ಶಾರ್ದೂಲವಿಕ್ರೀಡಿತ ವೃತ್ತ

ಮತ್ತೇಭವಿಕ್ರೀಡಿತ ವೃತ್ತ

ಸ್ರಗ್ಧರಾ ವೃತ್ತ

ಮಹಾಸ್ರಗ್ಧರಾ ವೃತ್ತ

ಅಂಶಗಣಸಂಪಾದಿಸಿ

ಅಂಶಗಳ ಆಧಾರದಿಂದ ಗಣ ವಿಭಾಗ ಮಾಡುವುದೇ ಅಂಶಗಣ.ಇದನ್ನು ನಾಗವರ್ಮನು "ಕರ್ಣಾಟಕ ವಿಷಯಜಾತಿ" ಎಂದೂ ಹಾಗೇ ಜಯಕೀರ್ತಿಯು "ಕರ್ಣಾಟಕವಿಷಯಭಾಷಾಜಾತಿ" ಎಂದೂ ಕರೆದಿದ್ದಾರೆ.

ಇದು ಅಪ್ಪಟ ದೇಸೀ ಛಂದಸ್ಸಿನ ಪ್ರಕಾರವಾಗಿದೆ.

ಒಂದು ಅಂಶ ಎಂದರೆ ಒಂದು ಮಾತ್ರಾ ಕಾಲವೂ ಆಗಬಹುದು, ಅಥವಾ ಎರಡು ಮಾತ್ರಾಕಾಲವೂ ಆಗಬಹುದು. ಗಣದ ಆರಂಭದಲ್ಲಿ ಮಾತ್ರ ಎರಡು ಮಾತ್ರೆಗಳಿಗೆ ಒಂದು ಅಂಶವನ್ನು ಪರಿಗಣಿಸಬೇಕು.

ಉದಾಃ- "ಕವಿತೆ" ಈ ಶಬ್ದದಲ್ಲಿ ಎರಡು ಅಂಶಗಳಾಗುತ್ತವೆ. 'ಕವಿ' ಎಂಬುದು ಒಂದು ಅಂಶವಾದರೆ 'ತೆ' ಎಂಬುದು ಇನ್ನೊಂದು ಅಂಶವಾಗುತ್ತದೆ,

ಇದರಲ್ಲಿ ಮೂರು ವಿಧ. ಅವನ್ನು ಬ್ರಹ್ಮಗಣ,ವಿಷ್ಣುಗಣ,ರುದ್ರಗಣ ಎಂದು ಕರೆಯುವರು.

(ವಿ.ಸೂ- ಗು-ಗುರು, ಲ-ಲಘು,ಅಲ್ಪವಿರಾಮ(,)ದಿಂದ ಅಂಶಗಳನ್ನು ಬೇರ್ಪಡಿಸಿದೆ.) ಬ್ರಹ್ಮಗಣದಲ್ಲಿ ಎರಡು ಅಂಶಗಳಿರುತ್ತವೆ. ಅವು ಈ ನಾಲ್ಕು ರೀತಿಯಲ್ಲಿಯೂ ಇರಬಹುದು

೧. ಗು,ಗು

೨. ಗು,ಲ

೩,ಲಲ,ಗು

೪.ಲಲ,ಲ

ಹಾಗೆಯೇ ವಿಷ್ಣುಗಣದಲ್ಲಿ ಮೂರು ಅಂಶಗಳು ಇರುತ್ತವೆ. ಅವುಗಳ ವಿಧಗಳು ಹೀಗಿವೆ-

೧.ಗು,ಲ,ಲ

೨.ಗು,ಗು,ಲ

೩.ಗು,ಗು,ಗು

೪.ಗು,ಲ,ಗು

೫.ಲಲ,ಗು,ಗು

೬.ಲಲ,ಗು,ಲ

೭.ಲಲ,ಲ,ಗು

೮.ಲಲ,ಲ,ಲ

ಹಾಗೆಯೇ ರುದ್ರಗಣದಲ್ಲಿ ನಾಲ್ಕು ಅಂಶಗಳಿರುತ್ತವೆ, ಅವುಗಳ ವಿಧಗಳನ್ನೂ ಹೀಗೆ ತೋರಿಸಬಹುದು

೧.ಗು,ಲ,ಲ,ಲ

೨.ಗು,ಗು,ಲ,ಲ

೩.ಗು,ಗು,ಗು,ಲ

೪.ಗು,ಗು,ಗು,ಗು

೬,ಗು,ಲ,ಗು,ಲ

೭,ಗು,ಲ,ಲ,ಗು

೮. ಗು,ಗು,ಲ,ಗು

೯.ಗು,ಲ,ಗು,ಗು,ಇತ್ಯಾದಿ, ಹಾಗೆಯೇ ಮೊದಲ ಗುರುವಿನ ಬದಲು ಎರಡು ಲಘುಗಳನ್ನು ಇಟ್ಟುಕೊಂಡು ಕೂಡ ಗಣಗಳನ್ನು ರಚಿಸಬಹುದು. ಸಾಂಗತ್ಯ, ತ್ರಿಪದಿ, ಅಕ್ಕರ, ಸೀಸಪದ್ಯ ಅಕ್ಕರಿಕೆ, ಏಳೆ, ಗೀತಿಕೆ, ಅಂಶಷಟ್ಪದಿ, ಚೌಪದಿ, ಛಂದೋವತಂಸ, ಮದನವತಿ ಪಿರಿಯಕ್ಕರ,ಇತ್ಯಾದಿಗಳು ಅಂಶಛಂದಸ್ಸಿನ ಹಲವು ಪ್ರಕಾರಗಳು.

[5/3, 11:25 AM] mangala boja: ಯತಿ:

ಛಂದಸ್ಸಿನ ವೈಶಿಷ್ಟ್ಯತೆಗಳನ್ನು ವಿಚಾರ ಮಾಡುವಾಗ 'ಯತಿ'ಯನ್ನು ಮುಖ್ಯವಾಗಿ ಪರಿಗಣಿಸಬೇಕಾದ ಅವಶ್ಯಕತೆಯಿದೆ. 'ಯತಿ' ಎಂದರೆ ನಿಲುಗಡೆಯ ಸ್ಥಾನ.

ಯತಿ - - - > ನಿಲುಗಡೆಯ ಸ್ಥಾನ

ಪದ್ಯವನ್ನು ಓದುವಾಗ ಕೆಲವು ಕಡೆಗಳಲ್ಲಿ ನಿಲುಗಡೆಯ ಸ್ಥಳ ಬರುತ್ತದೆ. ಈ ನಿಲುಗಡೆಯ ಸ್ಥಾನವನ್ನೇ ಛಂದಸ್ಸಿನ ಪರಿಭಾಷೆಯಲ್ಲಿ 'ಯತಿ' ಎಂದು ಕರೆಯುತ್ತಾರೆ. ಇದು ಛಂದಸ್ಸಿನ ಪ್ರಮುಖ ಅಂಶವೆನಿಸಿದೆ. ಇದರ ಸ್ವರೂಪವನ್ನು ಕನ್ನಡ ಮತ್ತು ಸಂಸ್ಕೃತ ಛಂದೋಗ್ರಂಥಗಳಲ್ಲಿ ವಿವರಿಸಲಾಗಿದೆ.

ಒಂದು ಪದ್ಯವನ್ನು ಓದುವಾಗ ಒಂದು ನಿಯತವಾದ ಸ್ಥಾನದಲ್ಲಿ, ಓದುವಿಕೆಯ ಸುಭಗತೆಗೆ ಭಂಗ ಬರದ ಹಾಗೆ, ಉಸುರೆಳೆದುಕೊಳ್ಳಲು ಅಲ್ಲಲ್ಲಿ ನಿಲ್ಲಿಸಲಾಗುತ್ತದೆ. ಇಂತಹ ವಿಶ್ರಾಂತ ಸ್ಥಾನವೇ 'ಯತಿ'.

'ಯತಿ' ಎಲ್ಲೆಲ್ಲಿ ಬರಬೇಕು ಎನ್ನುವುದು ಮುಂದಿನ ಪ್ರಶ್ನೆ. ಜಯಕೀರ್ತಿಯ ಪ್ರಕಾರ ಪದಾಂತ್ಯದಲ್ಲಿ ಎಂದರೆ ಪ್ರತೀ ಪಾದದ ಅಂತ್ಯದಲ್ಲಿ 'ಯತಿ' ಬರಬೇಕು. ಆದರೆ ಇದು ಸಂಸ್ಕೃತದ ವಿಷಯವಾಯಿತು. ಕನ್ನಡದಲ್ಲಿ 'ಯತಿ'ಯ ವಿಚಾರವನ್ನು ಮೊದಲು ಪ್ರಸ್ತಾಪಿಸಿದವನು ಕವಿರಾಜಮಾರ್ಗಕಾರ. ನಾಗವರ್ಮನು 'ಯತಿ'ಯನ್ನು ಕನ್ನಡಕ್ಕೆ ಹೊರತಾದುದು ಎಂದು ಹೇಳಿದ್ದಾನೆ. ಆದರೂ ಕನ್ನಡದಲ್ಲಿ 'ಯತಿ' ಇಲ್ಲವೆಂದಲ್ಲ. ಕನ್ನಡದಲ್ಲಿ ಅದು ಸಹಜವಾದ ರೀತಿಯಲ್ಲಿದೆ.

ಉದಾ:

  *    *    *

ಖಂಡ|ವಿದೆಕೋ| ಮಾಂಸ|ವಿದೆಕೋ|

  *   *  *  *

ಗುಂಡಿ|ಗೆಯ|ಬಿಸಿ|ರಕ್ತ|ವಿದೆಕೋ

(* ಯತಿಯ ಸ್ಥಾನ)

ಕನ್ನಡದಲ್ಲಿ ಪ್ರಾಸಕ್ಕೆ ಹೆಚ್ಚು ಮಹತ್ವ ಕೊಟ್ಟಿರುವುದರಿಂದ ಕೆಲವೊಂದು ಕಡೆ ಕವಿಗಳು 'ಯತಿ ವಿಲಂಘನೆ' ಮಾಡಿದಂತೆ ಕಾಣುತ್ತದೆ. ಆದರೆ 'ಯತಿ'ಯ ಮಹತ್ವವನ್ನು ತಿಳಿದ ಮೇಲೆಯೂ 'ಯತಿ'ಯನ್ನು ಬಿಡುವ ವಿಚಾರವನ್ನು ವಿದ್ವಾಂಸರು ಮಾಡಿದ್ದಾರೆ. ಏಕೆಂದರೆ, ಅರ್ಥಕ್ಕೆ ಭಂಗ ಬರುವುದೆಂಬ ಕಾರಣಕ್ಕೆ ಕೆಲವು ಕಡೆ 'ಯತಿ'ಯನ್ನು ಬಿಡಲಾಗಿದೆ.